ರಾಜ್ಯದ ದೇವಸ್ಥಾನಗಳಿಗೆ ಮಂಜೂರಾದ ಹಣ.

1577(2180) ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) 1999-2000 ರಲ್ಲಿ ರಾಜ್ಯದ ಬೇರೆ ಬೇರೆ ದೇವಸ್ಥಾನಗಳಿಗೆ ಒದಗಿಸಲಾದ ಹಣ ಎಷ್ಟು?

2) ಮಂಗಳೂರು ವಿಶ್ವ ವಿದ್ಯಾಲಯದ ಯೋಗ ಪೀಠಕ್ಕೆ ಸರ್ಕಾರದಿಂದ ಅನುದಾನ ಒದಗಿಸಲಾಗುವುದೇ

3) ಹಾಗಾದಲ್ಲಿ ಒದಗಿಸಲಾದ ಅನುದಾನ ಎಷ್ಟು?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ರಾಜ್ಯ ಸಚಿವರು) :—

1) 1999-2000 ನೇ ಸಾಲಿಗೆ ಆಯವ್ಯಯದಲ್ಲಿ ದುರಸ್ಥಿ ಜೀರ್ಣೋದ್ಧಾರಕ್ಕೆ ರೂ. 1.26 ಕೋಟಿ ನಿರ್ಮಾಣಕ್ಕೆ ರೂ. 1.05 ಕೋಟಿ ಒದಗಿಸಲಾಗಿದೆ.

2) ಇಲ್ಲ ಧಾರ್ಮಿಕ ಮತ್ತು ದತ್ತಿ ಇಲಾಖಾ ವತಿಯಿಂದ ಧಾರ್ಮಿಕ ಸಂಸ್ಥೆಗಳ ದುರಸ್ಥಿ ಜೀರ್ಣೋದ್ಧಾರಕ್ಕಾಗಿ ಮತ್ತು ನಿರ್ಮಾಣಕ್ಕಾಗಿ ಅನುದಾನ.

ಮಂಜೂರು ಮಾಡಲು ಮಾತ್ರ ಅವಕಾಶವಿದೆ. ವಿಶ್ವವಿದ್ಯಾಲಯದ ಯಾವುದೇ ಖರ್ಚಿಗೆ ಅನುದಾನವನ್ನು ಅವಕಾಶ ಇರುವುದಿಲ್ಲ.

3) ಮೇಲ್ಕಂಡ ಉತ್ತರದ ಹಿನ್ನೆಲೆಯಲ್ಲಿ ಈ ಉಪ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಆಶ್ರಯ ಯೋಜನೆಯಡಿ ಮಂಜೂರಾದ ಮನೆಗಳು.

1578 (2181) ಶ್ರೀ ಎನ್. ಯೋಗಿಶ್ ಭಟ್ (ಮಂಗಳೂರು) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಆಶ್ರಯ ಯೋಜನೆಯಡಿ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು?

ಆ) ಅವುಗಳ ಪೈಕಿ ಕಟ್ಟಿ ಪೂರ್ಣಗೊಳಿಸಿದ ಮನೆಗಳ ಸಂಖ್ಯೆ ಎಷ್ಟು?

ಇ) 1999-2000 ನೇ ಸಾಲಿನಲ್ಲಿ ಈ ಯೋಜನೆಯಡಿ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು?

ಈ) ಅವುಗಳ ಪೈಕಿ ಕಟ್ಟಲಾಗುತ್ತಿರುವ ಮನೆಗಳ ಸಂಖ್ಯೆ ಎಷ್ಟು?

ಉ) 1999-2000 ನೇ ಸಾಲಿನಲ್ಲಿ ಈ ಉದ್ದೇಶಕ್ಕಾಗಿ ಒದಗಿಸಲಾದ ಹಣ ಎಷ್ಟು?